# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 855
ಮಾನ್ಯ ಸದಸ್ಯರ ಹೆಸರು : ಶ್ರೀ ಬಿ.ಜಿ.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 20-12-2021
ಉತ್ತರಿಸುವ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

* * *

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು; (ಸಂಪೂರ್ಣ ವಿವರ ನೀಡುವುದು) | ಕಲಬುರಗಿ ಜಿಲ್ಲೆಯಲ್ಲಿ 83 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಯಾದಗಿರಿ ಜಿಲ್ಲೆಯಲ್ಲಿ 41 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ವಿವರವನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ. |
| ಆ | ಸಮುದಾಯ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲು ಇರುವ ಮಾನದಂಡಗಳೇನು? ವಿವರ ನೀಡುವುದು) | ಐ.ಪಿ.ಹೆಚ್.ಎಸ್ ನಾರ್ಮ್ಸ್ ಪ್ರಕಾರ, ಸಮತಟ್ಟು ಪ್ರದೇಶದಲ್ಲಿ 1,20,000 ಜನಸಂಖ್ಯೆಗೆ ಒಂದರಂತೆ, ಗುಡ್ಡಗಾಡು ಹಾಗೂ ಗಿರಿಜನ ಪ್ರದೇಶದಲ್ಲಿ 80,000 ಜನಸಂಖ್ಯೆಗೆ ಒಂದರಂತೆ ಒಂದು ಸಮುದಾಯ ಆರೋಗ್ಯ ಕೇಂದ್ರವನ್ನು ತೆರೆಯಲು ಅವಕಾಶವಿರುತ್ತದೆ. |
| ಇ | ಒಂದು ಲಕ್ಷಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ ಪ್ರದೇಶಗಳಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರದ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು) | ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸುವ ಸಂಬಂಧ ಹಲವು ಪ್ರಸ್ತಾವನೆಗಳು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿವೆ. |
| ಈ | ಮೇಲ್ಕಂಡ ಜಿಲ್ಲೆಗಳ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರು ಹಾಗೂ ಇತರೆ ಸಿಬ್ಬಂದಿಗಳ ಕೊರತೆ ನಿವಾರಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತಿದೆ? (ವಿವರ ನೀಡುವುದು) | ರಾಜ್ಯದಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮದ ವಿವರಗಳನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |

**ಕಡತ ಸಂಖ್ಯೆ: ಆಕುಕ 855 ಚುರಪ್ರ 2021**

(ಡಾ॥ ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

## ಪ್ರಶ್ನೆ ಸಂಖ್ಯೆ:-855 ಅನುಬಂಧ-1

| ಕಲಬುರ್ಗಿ (ಗುಲಬರ್ಗಾ)ಜಿಲ್ಲೆಯ ಪ್ರಾಥಮಿಕ ಆರೋಗ್ಯ ಕೇಂದ್ರಗಳು | | | | | | | |
|---|---|---|---|---|---|---|---|
| ಕ್ರ.ಸಂ. | ಅಫಜಲ್‌ಪುರ | ಅಳಂದ | ಚಿಂಚೋಳಿ | ಚಿತ್ತಾಪುರ | ಕಲಬುರ್ಗಿ (ಗುಲಬರ್ಗಾ) | ಜೇವರ್ಗಿ | ಸೇಡಂ |
| 1 | ಅತನೂರ | ಧಂಗಾಪೂರ | ಐನಾಪುರ | ದಿಗ್ಗಾಂವ | ಔರಾದ್ ಬಿ | ಆಂದೋಲಾ | ಇಟಕಲ್ |
| 2 | ಬಡದಾಳ | ಹಿರೋಳ್ಳಿ | ನಿಡಗುಂದ | ಕೊರವಾರ | ನಂದೂರ ಬಿ | ಅಂಕಲಗಾ | ಕಾನಾಗಡ್ಡ |
| 3 | ಗೊಬ್ಬೂರ ಬಿ | ಗೋಳಾ ಬಿ | ಚಂದನಕೇರಾ | ಅಲಹಳ್ಳಿ | ಡೊಂಗರಗಾಂವ | ಅರಳಗುಂಡಗಿ | ಖಂಡೇರಾಯನಪ |
| 4 | ಕರಜಗಿ | ಕಡಗಂಚಿ | ಚಿಮ್ಮನಚೋಡ | ಆಲ್ಲೂರ ಕೆ | ಫರತಾಬಾದ್ | ಬಿರಿಯಾಳ ಬಿ | ಕೊಡ್ಲಾ |
| 5 | ಮಣ್ಣೂರ | ಖಜೂರಿ | ಕೊಡ್ಲಿ | ಅರಣಕಲ್ | ಹೊನ್ನ ಕಿರಣಗಿ | ಗಂವಾರ | ಕೋಲಕುಂದಾ |
| 6 | ಮಾಶ್ಯಾಳ | ಕೊರಳ್ಳಿ | ಮಿರಿಯಾಣ | ದಂಡೋತ್ತಿ | ಉಚ್ಚ ನ್ಯಾಯಲಯ ಆವರಣ ಗುಲಬರ್ಗಾ | ಇಜೇರಿ | ಕುರಕುಂಟಾ |
| 7 | ರೇವೂರ ಬಿ | ಪಡಸಾವಳಗಿ | ಮೊಘಾ | ಕಲ್ಲಹಿಪ್ಪರ್ಗಾ | ಹಿರೇಸಾವಳಗಿ | ಜೇರ್ಟಗಿ | ಮದನಾ |
| 8 | ಉಡಚಣ | ವಿ.ಕೆ.ಸಲಗರ | ರಟಕಲ್ | ಕೊಲ್ಲೂರ | ಹರಸೂರ | ಕೂಡಿ | ಯಡಗಾ |
| 9 | ದೇಸಾಯಿ ಕಲ್ಲೂರ | ಯಳಸಂಗಿ | ರುದನೂರು | ಮಾಡಬೂಳ | ಕಲ್ಲಹಂಗರಗಾ | ಮಳ್ಳಿ | |
| 10 | | ಅಂಬಲಗಾ | ಸಾಲೆಬೀರನಹಳ್ಳಿ | ಮಂಗಲಗಿ | ಕಮಲಾಪೂರ | ಮಂದೇವಾಲ್ | |
| 11 | | ಸರಸಂಬ | ಸುಲೇಪೇಟ | ನಾಲವಾರ | ಮಹಾಗಾಂವ | ನರಿಬೋಳ | |
| 12 | | ತಡಕಲ್ | | ಪೇಠಸಿರೂರ | ಸೊಂತ | ವಡಗೇರಾ | |
| 13 | | ಭೂಸನೂರ | | ರಾವೂರ | ಶ್ರೀನಿವಾಸ್ ಸರಡಗಿ | | |
| 14 | | ಮಾಡಿಯ್ಯಾಳ | | ಟೆಂಗಳಿ | | | |
| 15 | | ಕಿಣ್ಣಿಸುಲ್ತಾನ | | | | | |
| 16 | | ಜಿಡಗಾ | | | | | |

| ಯಾದಗಿರಿ ಜಿಲ್ಲೆಯ ಪ್ರಾಥಮಿಕ ಆರೋಗ್ಯ ಕೇಂದ್ರ | | | |
|---|---|---|---|
| ಕ್ರ.ಸಂ. | ಶಹಾಪುರ | ಸುರಪುರ | ಯಾದಗಿರಿ |
| 1 | ಬೆಂಡೆಬೊಂಬಳಿ | ದೇವರಗೋನಾಳ | ಅಜಲಾಪೂರ |
| 2 | ಚಟ್ನಹಳ್ಳಿ | ಗುತ್ತಿಬಸವೇಶ್ವರ | ಬಳಿಚಕ್ರ |
| 3 | ಗೋಗಿ | ಹಸನಾಪೂರ | ಗಾಜರಕೋಟ |
| 4 | ಹತ್ತಿಗೂಡುರು | ಹೇಮನೂರ | ಕಡೇಚೂರ |
| 5 | ಹೈಯ್ಯಾಳ-ಬಿ | ಕಕ್ಕೇರಾ | ಕೌಳೂರ |
| 6 | ಚಾಮನಾಳ | ಕಲ್ಲದೇವನಹಳ್ಳಿ | ಕೊಂಕಲ್ |
| 7 | ಕುರಕುಂದಾ | ಕೋಡೆಕಲ್ | ಕೋಟಗೇರಾ |
| 8 | ಸಗರ | ಮಲ್ಲಾ-ಬಿ | ಮಲ್ದಾರ |
| 9 | ಶಿರವಾಳ | ನಗನೂರ | ಮಾದ್ವಾರ |
| 10 | ವನದುರ್ಗಾ | ಪೇಠಮ್ಮಾಪೂರ | ಕಂದಕೂರ |
| 11 | ತಡಿಬಿಡಿ | ರಾಜನಕೊಳ್ಳುರ | ಎಲ್ಹೇರಿ |
| 12 | | ಶ್ರೀನಿವಾಸಪುರ | ಅಲ್ಲಿಪೂರ |
| 13 | | ಯಾಳಗಿ | ಯರಗೋಳ |
| 14 | | ಕೆಂಬಾವಿ | ಹೊನಗೇರಾ |
| 15 | | | ಮುದ್ನಾಳ |
| 16 | | | ಹತ್ತಿಕುಣಿ |

ಅನುಬಂಧ-3

# ವಿಶೇಷ ನೇಮಕಾತಿ ವಿಭಾಗದಿಂದ ಕೈಗೊಂಡಿರುವ ನೇಮಕಾತಿಯ ಬಗ್ಗೆ ವಿವರ

ಇಲಾಖೆಯಲ್ಲಿ ಖಾಲಿ ಇರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ/ತಜ್ಞ ವೈದ್ಯರ ಹುದ್ದೆಗಳನ್ನು 2020-21 ನೇ ಸಾಲಿನ ವಿಶೇಷ ನೇರ ನೇಮಕಾತಿ ಸಮಿತಿ ಮೂಲಕ ಈ ಕೆಳಕಂಡಂತೆ ಭರ್ತಿ ಮಾಡಲಾಗಿದೆ:

| | ನೇಮಕ ಮಾಡಲಾದ ವೈದ್ಯರ ಸಂಖ್ಯೆ | ಹುದ್ದೆಗೆ ಹಾಜರಾದ ವೈದ್ಯರ ಸಂಖ್ಯೆ |
|---|---|---|
| ಸಾ.ಕ.ವೈ. | 1048 | 855 |
| ತಜ್ಞ ವೈದ್ಯರು | 692 | 343 |

ಉಳಿದಂತೆ ಖಾಲಿ ಇರುವ 106 ಸಾ.ಕ.ವೈ ಮತ್ತು 49 ತಜ್ಞ ವೈದ್ಯರ ಹುದ್ದೆಗಳನ್ನು ವಿಶೇಷ ನೇರನೇಮಕಾತಿ ಸಮಿತಿಯ ಹೆಚ್ಚುವರಿ ಪಟ್ಟಿ ಮೂಲಕ ಭರ್ತಿ ಮಾಡುವ ಪ್ರಕ್ರಿಯೆ ಚಾಲ್ತಿಯಲ್ಲಿದೆ. ಹಾಗೂ 28 ಕೀಲು ಮತ್ತು ಮೂಳೆ ತಜ್ಞರನ್ನು ಮತ್ತು 88 ದಂತ ಆರೋಗ್ಯಾಧಿಕಾರಿಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ.

2021 ನೇ ಸಾಲಿನಲ್ಲಿ ಎಂಬಿಬಿಎಸ್ ಪದವಿ ಪೂರೈಸಿದ 2050 ವೈದ್ಯ ಅಭ್ಯರ್ಥಿಗಳನ್ನು 1 ವರ್ಷದ ಕಡ್ಡಾಯ ಸೇವೆಗಾಗಿ ಸ್ಥಳನಿಯುಕ್ತಿಗೊಳಿಸಲಾಗಿದ್ದು, ಈ ಪೈಕಿ 1731 ವೈದ್ಯರು ಹಾಜರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಸೇವಾನಿರತ ಸ್ನಾತಕೋತ್ತರ (ಆರ್‌ಜಿಹೆಚ್‌ಎಸ್ /ಡಿಎನ್‌ಬಿ/ಸಿಪಿಎಸ್/ಎಂಪಿಹೆಚ್) ವ್ಯಾಸಂಗ ಪೂರೈಸಿ ಬರುವ ತಜ್ಞ ವೈದ್ಯರನ್ನು ಖಾಲಿ ಇರುವ ಹುದ್ದೆಗೆ ನೇಮಿಸಲಾಗುತ್ತಿದೆ.

ಎಂಬಿಬಿಎಸ್ ಪದವಿ ಪೂರೈಸಿದ ಮತ್ತು ಸ್ನಾತಕೋತ್ತರ ಪದವಿ ಪೂರೈಸಿದ ವೈದ್ಯ ಅಭ್ಯರ್ಥಿಗಳನ್ನು ಒಂದು ವರ್ಷದ ಕಡ್ಡಾಯ ಸರ್ಕಾರಿ ಸೇವೆಗೆ ನೇಮಿಸುವ ಮೂಲಕ ವೈದ್ಯರುಗಳ ಕೊರತೆ ನೀಗಿಸಲು ಕ್ರಮಕೈಗೊಳ್ಳಲಾಗುತ್ತಿದೆ.

- ಸರ್ಕಾರದ ವಿಶೇಷ ನೇಮಕಾತಿ ನಿಯಮಗಳ ಅಧಿಸೂಚನೆ ಸಂಖ್ಯೆ: ಹೆಚ್‌ಎಫ್‌ಡಬ್ಲ್ಯು 71 ಹೆಚ್‌ಎಸ್‌ಹೆಚ್‌2019, ದಿನಾಂಕ:16.06.2020ರನ್ವಯ ವಿಶೇಷ ನೇಮಕಾತಿ ವಿಭಾಗದಿಂದ ಹಿರಿಯ ವೈದ್ಯಾಧಿಕಾರಿಗಳು (ತಜ್ಞರು) / ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು / ದಂತ ಆರೋಗ್ಯ ಅಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಎಸ್‌ಆರ್‌ಸಿ/68/2019-20, ದಿನಾಂಕ:10.09.2020ರಲ್ಲಿ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು.

- ಅರ್ಜಿ ಸಲ್ಲಿಸಿದ್ದ ಅರ್ಹ ಅಭ್ಯರ್ಥಿಗಳ ಮೂಲ ದಾಖಲಾತಿಗಳ ಪರಿಶೀಲನೆಯನ್ನು ನಡೆಸಲಾಗಿ, ಈ ಕೆಳಕಂಡಂತೆ ಅಂತಿಮ ಆಯ್ಕೆ ಪಟ್ಟಿಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

| Sl. No. | Cadre | Final List No. and Date | Total No. of Candidates selected |
|---|---|---|---|
| 1 | Senior Medical Officer/Specialist in General Medicine (M.D. General Medicine) | ಎಸ್.ಆರ್‌ಸಿ/68-ಜಿಎಂ/2020-21, ದಿನಾಂಕ:08.05.2021. | 75 |
| 2 | Senior Medical Officer/Specialist in General Surgery (M.S. General Surgery) | ಎಸ್.ಆರ್‌ಸಿ/68-ಜಿಎಸ್/2020-21, ದಿನಾಂಕ:08.05.2021. | 57 |
| 3 | Senior Medical Officer/Specialist in Obstetrics and Gynaecology (M.s Obstetrics and Gynaecology/DCO) | ಎಸ್.ಆರ್‌ಸಿ/68-ಓ.ಬಿ.ಜಿ/2020-21, ದಿನಾಂಕ:08.05.2021. | 145 |
| 4 | Senior Medical Officer/Specialist in ENT (M.S. ENT/DLO) | ಎಸ್.ಆರ್‌ಸಿ/68-ಇ.ಎನ್.ಟಿ./2020-21, ದಿನಾಂಕ:08.05.2021. | 40 |

| | | | |
|---|---|---|---|
| 5 | Senior Medical Officer/Specialist in Dermatology and Venereal diseases (Skin) (M.D. Skin and VD/DVD) | ಎಸ್.ಆರ್‌ಸಿ/68–ಡಿಎಂ/2020–21, ದಿನಾಂಕ:08.05.2021. | 35 |
| 6 | Senior Medical Officer/Specialist in Anaesthesia (M.D. Anaesthesia/D.A.) | ಎಸ್.ಆರ್‌ಸಿ/68–ಅರವಳಿಕೆ/2020–21, ದಿನಾಂಕ:08.05.2021. | 142 |
| 7 | Senior Medical Officer/Specialist in Paediatrician (M.D. Paediatrician / DCH) | ಎಸ್.ಆರ್‌ಸಿ/68–ಪಿಡಿ/2020–21, ದಿನಾಂಕ:08.05.2021. | 153 |
| 8 | Senior Medical Officer/Specialist in Ophthalmology (M.S. Opthal./D.O.M.S) | ಎಸ್.ಆರ್‌ಸಿ/68–ನೇತ್ರ/2020–21, ದಿನಾಂಕ:08.05.2021. | 51 |
| 9 | Senior Medical Officer/Specialist in Radiology (M.D.R.D/D.M.R.D.) | ಎಸ್.ಆರ್‌ಸಿ/68–ಆರ್‌ಡಿ/2020–21, ದಿನಾಂಕ:08.05.2021. | 17 |
| 10 | General Duty Medical Officer | ಎಸ್‌ಆರ್‌ಸಿ/68/ಸಾ.ಕ.ವೈ/2020–21, ದಿನಾಂಕ:12.05.2021. | 1048 |
| 11. | Senior Medical Officer/Specialist in Orthopaedics (M.S. Ortho/D.Ortho) | ಎಸ್‌ಆರ್‌ಸಿ/68–ಕಿ.ಮೂ/2020–21, ದಿನಾಂಕ:02.09.2021ರಲ್ಲಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದೆ. | 31 |
| 12. | Dental Health Officer | ಅರ್ಹ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ತಾತ್ಕಾಲಿಕ ಆಯ್ಕೆ ಪಟ್ಟಿಗೆ ಬಾಧಿತರಿಂದ ಬಂದಂತಹ ಆಕ್ಷೇಪಣೆಗಳನ್ನು ಪರಿಶೀಲಿಸುವ ಹಂತದಲ್ಲಿರುತ್ತದೆ. | |

ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಖಾಲಿ ಇರುವ 293 ಅರೆ ವೈದ್ಯಕೀಯ ಹುದ್ದೆಗಳನ್ನು ಭರ್ತಿ ಮಾಡಲು ಹಾಗೂ ಇಲಾಖೆಯಲ್ಲಿ ಖಾಲಿ ಇರುವ 400 ಫಾರ್ಮಾಸಿಸ್ಟ್, 150 ಕಿರಿಯ ಪ್ರಯೋಗಾ ಶಾಲಾ ತಂತ್ರಜ್ಞರು ಹಾಗೂ 08 ಕ್ಷ-ಕಿರಣ ತಂತ್ರಜ್ಞರ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಪರಿಶೀಲನೆಯಲ್ಲಿರುತ್ತದೆ.

ಭಾರತ ಸರ್ಕಾರದ ಆರೋಗ್ಯ & ಕುಟುಂಬ ಕಲ್ಯಾಣ ಮಂತ್ರಾಲಯದ ದಿನಾಂಕ:20.05.2021ರ ನಡವಳಿಯಲ್ಲಿನ ಅನುಮೋದನೆಯಂತೆ ರಾಜ್ಯದಲ್ಲಿ ಒಟ್ಟು 3,600 ಸಮುದಾಯ ಆರೋಗ್ಯ ಅಧಿಕಾರಿಗಳನ್ನು ನೇಮಕಾತಿ ಮಾಡಿಕೊಳ್ಳಲಾಗಿರುತ್ತದೆ.